ಪ್ರಕಟಣೆ

ಅಧ್ಯಕ್ಷರು : ಮಾನ್ಯ ವಿಧಾನ ಪರಿಷತ್ತಿನ ಸಭಾಪತಿಯವರಿಂದಈ ಕೆಳಕಂಡ ಸಂದೇಶವು ಬಂದಿರುತ್ತದೆ.

ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯ ವಿಧಾನ ಹಾಗೂ ನಡವಳಿಕೆಗಳು ನಿಯಮ 114ರ ಮೇರೆಗೆ ವಿಧಾನ ಪರಿಷತ್ತಿನಲ್ಲಿ ದಿನಾಂಕ 1ನೇ ಸೆಪ್ಟೆಂಬರ್ 1994 ರಂದು ಈ ಕೆಳಕಂಡ ವಿಧೇಯಕವು ಯಾವುದೇ ತಿದ್ದುಪಡಿ ಇಲ್ಲದೇ ಅನುಮೋದಿಸಿತು ಎಂದು ತಿಳಿಸಪಡಿಸುತ್ತೇನೆ.

ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ (ತಿದ್ದುಪಡಿ) ವಿಧೇಯಕ 1994
ಹಾಗೂ ಕರ್ನಾಟಕ ವಿಶೇಷ ನ್ಯಾಯಾಧೀಕರಣ ವಿಧೇಯಕ 1994

ಅಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾಪಿಸಲಾದ ವಿಷಯ :

ವಿಷಯ : ನಾಲ್ಕನೇ ದರ್ಜೆಯ ನೌಕರರ ಮುಷ್ಕರದ ಬಗ್ಗೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೇ, ನಾಲ್ಕನೇ ದರ್ಜೆಯ ನೌಕರರು ಇವತ್ತು ಮುಷ್ಕರ ಹೂಡಿದ್ದಾರೆ. ಇದರ ವಿಧಾನಸಭೆಯಲ್ಲಿಯೂ ಇದರ ಪರಿಣಾಮ ಬೀರಿ ಗಂಭೀರವಾದ ಪರಿಸ್ಥಿತಿ ನಿರ್ಮಾಣ ಆಗಿದೆ. ಈ ಬಗ್ಗೆ ಸರ್ಕಾರ ಅವರನ್ನು ಕರೆದು ಮಾತುಕತೆ ಆಡಿ ಅವರ ಬೇಡಿಕೆಗಳು ಏನು ಎಂದು ಕೇಳತಕ್ಕ ಸೌಜನ್ಯ ತೋರಿಸಬೇಕು. ಇದುವರೆಗೆ ಆ ಸೌಜನ್ಯ ತೋರಿಲ್ಲ. ನಾನು ತಮ್ಮ ಮೂಲಕ ಕೇಳುತ್ತೇನೆ. ಸರ್ಕಾರದ ಪರವಾಗಿ ಯಾರು ಇದ್ದಾರೆ ಅವರು ಒಂದು ಹೇಳಿಕೆ ಕೊಡಬೇಕು. ನಾನು ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ. ಅವರ ಬೇಡಿಕೆಗಳು ಈಡೇರಿಕೆಗೆ ಒಂದೇ ಸಮನೆ ಒತ್ತಾಯ ಮಾಡುತ್ತಿದ್ದಾರೆ. ಆದ್ದರಿಂದ ಯಾರು ಅವರ ಪರವಾಗಿ ಉತ್ತರ ಅಥವಾ ಹೇಳಿಕೆ ಕೊಡುತ್ತಾರೆ.

ಅಧ್ಯಕ್ಷರು : ಸರ್ಕಾರದ ಪರವಾಗಿ ಉತ್ತರ ಹೇಳುತ್ತಾರೆ.

ಶ್ರೀ ಹೆಚ್. ಎಂ. ರೇವಣ್ಣ (ಕೃಷಿಖಾತೆ ಸಚಿವರು) : ಮಾನ್ಯ ಮುಖ್ಯಮಂತ್ರಿಗಳು ಅವರನ್ನು ಕರೆಯಿಸಿ ಮಾತನಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಅವರ ಛೇಂಬರಿನಲ್ಲಿ ಮಾತುಕತೆ ನಡೆಯುತ್ತಿದೆ.

ವಿಷಯ : ಲೋಕಸೇವಾ ಆಯೋಗದಲ್ಲಿ ನಡೆಯಿತೆನ್ನಲಾದ ಅವ್ಯವಹಾರ.

* ಶ್ರೀ ಬಿ.ಎಸ್.ಯಡಿಯೂರಪ್ಪ : ನಾನು ಕೆಲವು ದಾಖಲೆಗಳನ್ನು ತಮಗೆ ಕಳುಹಿಸಿ ಕೊಡುತ್ತಿದ್ದೇನೆ. ಕರ್ನಾಟಕ ಲೋಕಸಭಾ ಆಯೋಗದ ಬಗ್ಗೆ ಇಲ್ಲಿ ಪ್ರಸ್ತಾಪ ಮಾಡಿದ್ದೆ. ಸುಮಾರು 25 ಸಾವಿರ ವಿದ್ಯಾರ್ಥಿಗಳು ಪರೀಕ್ಷೆಗೆ ಕುಳಿತಿರತಕ್ಕವರಿಗೆ ಅನ್ಯಾಯ ಆಗಿದೆ, ಈ ಪರೀಕ್ಷೆಯನ್ನು ರದ್ದು ಮಾಡಿ, ಹೊಸದಾಗಿ ಪರೀಕ್ಷೆ ನಡೆಸಲು ಕಠಿಣ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿದೆ. ನಾನು ಇನ್ನೂ ಕೆಲವು ದಾಖಲೆಗಳನ್ನು

ಕೊಡುತ್ತೀದ್ದೇನೆ.

ಅಧ್ಯಕ್ಷರು : ಅವರು ಹೇಳಿಕೆ ಕೊಡುತ್ತಾರೆ. ನೀವು ದಾಖಲೆಗಳನ್ನು ಕಳಿಸಿಕೊಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ :ಒರಿಜಿನಲ್ ಆನ್ಸರ್ ಪೇಪರ್ ಯಾವುದು ಇದೆ ಅದನ್ನು ಕಳುಹಿಸಿಕೊಡುತ್ತಿದ್ದೇನೆ. ಆನ್ಸರ್ ಪೇಪರ್ ಸೀಕ್ರೆಟ್ ಡಾಕ್ಯುಮೆಂಟ್ ; ಯಾರು ಪರೀಕ್ಷೆಯನ್ನು ಬರೆದಿದ್ದಾರೆ. ಸಾಮಾನ್ಯ ಜ್ಞಾನ, ಇಂಡಿಯನ್ ಹಿಸ್ಟರಿ ಮತ್ತು ಎಸ್ಸೇ ಈ ಮೂರು ಪತ್ರಿಕೆಯಲ್ಲಿ ಒರಿಜಿನಲ್ ಆನ್ಸರ್ ಪೇಪರ್ ಬರೆದಿದ್ದನ್ನು ಇವತ್ತು ಸ್ಪೀಡ್ ಪೋಸ್ಟ್ ಮೂಲಕ ಅಲ್ಲಿರುವಂತಹ ಆರ್ಗನೈಸಿಂಗ್ ಸೆಕ್ರೆಟರಿ ಕರ್ನಾಟಕ ಪಬ್ಲಿಕ್ ಸರ್ವೀಸ್ ಕಮೀಷನ್ ಆಂಟಿ ಕರಪ್ಷನ್ ಕಮಿಟಿ ಅವರು ಪೋಸ್ಟ್‌ನಲ್ಲಿ ಮೈಸೂರಿನಿಂದ ಕಳುಹಿಸಿದ್ದಾರೆ. 31ನೇ ಆಗಸ್ಟ್ 1994ರಂದು ತಲುಪಿದೆ. ಅವರ ಮೂರು ಕಾಪಿಯನ್ನು ಆನ್ಸರ್ ಪೇಪರ್ಸ್‌ನ ಜೆರಾಕ್ಸ್ ಕಾಪಿಯನ್ನು ತಮಗೆ ಕಳುಹಿಸಿಕೊಡುತ್ತಿದ್ದೇನೆ. ತಾವು ಪರಾಂಭಿಸಬೇಕು. ಯಾವ ಕೋಡ್ ನಂಬರ್, ಯಾವ ಪರೀಕ್ಷೆ, ಆ ಕೋಡ್ ನಂಬರ್ ಎಲ್ಲೆಲ್ಲಿ ಹೋಗಿದೆ ಎನ್ನುವಂತಹರೂ ಸಹ ಇದೆ. ಇದು ಸೀಕ್ರೆಟ್ ಡಾಕ್ಯುಮೆಂಟ್. ನಾನು ಎಕ್ಸಾಮಿನೀಷನ್ ಬರೆದಿದ್ದೇನೆ, ನನ್ನ ಪೇಪರ್ ಎಲ್ಲಿಗೆ ಕಳುಹಿಸಿದ್ದಾರೆ ಎನ್ನುವಂತಹ ಕೋಡ್ ನಂಬರ್‌ಗಳು ಇರುತ್ತದೆ. ಆ ಕೋಡ್ ನಂಬರ್, ಇಂತಹ ಕಡೆ ಮಾರಾಟ ಆಗುತ್ತಿರುವ ಬಗ್ಗೆ ದಾಖಲೆ ನನ್ನಲ್ಲಿ ಇದೆ. ಮೂರನೆಯದು ಯಾವ ಪೇಪರನ್ನು ಯಾವ ಊರಿಗೆ ಎಷ್ಟು ಪೇಪರ್ ಕಳುಹಿಸಿದೆ. ಆ ಕೋಡ್ ನಂಬರ್ ಏನೇನು? ಇಡೀ ಈ ಒಂದು ಕೆಪಿಎಸ್‌ಸಿ ಎಕ್ಸಾಮಿನೇಷನ್ ಯಾವ ರೀತಿಯಲ್ಲಿ ವ್ಯಾಪಾರ ನಡೆಯುತ್ತಿದೆ ; ಯಾವ ಪೇಪರ್ ಎಲ್ಲಿಗೆ ಕಳಿಸಿದ್ದಾರೆ. ಕೋಡ್ ನಂಬರ್ ಏನು? ಆ ಪ್ರೊಫೆಸರ್ ಯಾರು? ಅವರ ಪುಲ್ ಅಡ್ರೆಸ್ ಇದರ ಬಗ್ಗೆ ಜೆರಾಕ್ಸ್ ಮಾಡಿರುವಂತಹ ಕಾಪಿ ಇದೆ. ಅದಕ್ಕಾಗಿ ನಾನು ತಮ್ಮಲ್ಲಿ ಹೇಳುತ್ತೇನೆ. ಒಂದು ಗಂಟೆ ತಡ ಮಾಡಿದರೂ ಅಲ್ಲಿ ಡಾಕ್ಯುಮೆಂಟನ್ನು ಟ್ಯಾಂಪರ್ ಮಾಡುವಂತಹ ಅವಕಾಶ ಆಗುತ್ತದೆ. ಆ ರೆಕಾರ್ಡ್ಸ್ ಅನ್ನು ಸೀಜ್ ಮಾಡಿ, ಆ ಸೆಕ್ರೆಟರಿಯವರನ್ನು ಸಸ್ಪೆನ್‌ಷನ್‌ನಲ್ಲಿಟ್ಟು ಅವರು ಈ ಪರೀಕ್ಷೆಯನ್ನು ಹೊಸದಾಗಿ ಮಾಡುವುದಕ್ಕೆ ಆದೇಶವನ್ನು ತಾವು ನೀಡಬೇಕು ಎಂದು ವಿನಂತಿ ಮಾಡುತ್ತೇನೆ. ನಾವೆಲ್ಲಾ ವಿರೋಧ ಪಕ್ಷದವರು ಒಕ್ಕೊರಲಿನಿಂದ ಕೇಳಿದ್ದೇವೆ. ಸೋಮವಾರ ರಿಪ್ಲೈ ಕೊಡುತ್ತೇವೆಂದು ಹೇಳಿದ್ದಾರೆ. ಇವತ್ತು ಇಂತಹ ಒಂದು ಹಗಲು ದರೋಡೆ, ವ್ಯವಸ್ಥಿತವಾದ ಒಂದು ಸಂಚು ಮಾಡಿ ಪ್ರತಿಭಾವಂತಹ ವಿದ್ಯಾರ್ಥಿಗಳಿಗೆ ಅವಕಾಶ ಸಿಗದೇ ಮೋಸ ಮಾಡಿ ಕೆಎಎಸ್ ಡಿಗ್ರಿಗಳನ್ನು ಮಾಡುವಂತಹ ವ್ಯವಸ್ಥೆ ನಡೆದಿದೆ. ಇದರ ಎಲ್ಲಾ ವಿವರಗಳನ್ನು ನಾನು ತಮಗೆ ಕೊಟ್ಟಿದ್ದೇನೆ. ಈ ಕೆಎಎಸ್ ಪರೀಕ್ಷೆ ನೇಮಕ ಮಾಡುವಂತಹ ಸಂದರ್ಭದಲ್ಲಿ ವ್ಯವಹಾರ ನಡೆದಿದೆ ಕೋಡ್ ನಂಬರ್ ಬಹಿರಂಗ ಆಗುವ ಹಾಗೆ ಇಲ್ಲ. ಸನ್ಮಾನ್ಯ ಹಿರಿಯ ಸಚಿವರು ತಮಗೆ ಗೊತ್ತಿದೆ. ಕೋಡ್ ನಂಬರ್ ಬಹಿರಂಗ ಆಗಿದೆ. ಸಂಪೂರ್ಣ ವ್ಯವಹಾರದ ದಾಖಲೆ ಇದೆ. ಯಾವ ಪೇಪರ್ ಎಲ್ಲಿಗೆ ಹೋಗಿದೆ, ಅನ್ಸರ್ ಪೇಪರ್ ಒರಿಜಿನಲ್ ಡಾಕ್ಯುಮೆಂಟ್, ಮೂರು ಪೇಪರ್ ಕೊಟ್ಟಿದ್ದೇನೆ. ಒರಿಜಿನಲ್ ನನ್ನ ಹತ್ತಿರಇದೆ. ಜೆರಾಕ್ಸ್ ಕಾಪಿ ನಾನು ಇಲ್ಲಿ ಕಳುಹಿಸಿಕೊಡುತ್ತಿದ್ದೇನೆ. ಸೋಮವಾರ ಉತ್ತರ ಕೊಡುತ್ತೇನೆ. ಇದರ ಬಗ್ಗೆ

ಪರೀಕ್ಷೆಯನ್ನು ರದ್ದುಮಾಡುವ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ತಿಳಿಸಿದ್ದರು. ಮೇಲು ನೋಟಕ್ಕೆ ನನ್ನ ಮನಸ್ಸಿಗೂ ಮನವರಿಕೆ ಆಗಿದೆ ಎಂದು ಸನ್ಮಾನ್ಯ ಉಪ ಮುಖ್ಯಮಂತ್ರಿಗಳು ಈ ಸದನದಲ್ಲಿ ಉತ್ತರ ಕೊಟ್ಟರು. ಸೋಮವಾರ ಉತ್ತರ ಕೊಡುತ್ತೇನೆಂದರು. ಇವತ್ತಿನವರೆಗೆ ಕೊಡುತ್ತಾ ಇಲ್ಲ. ಅದಕ್ಕಾಗಿ ದಯಮಾಡಿ ನಾನು ಒತ್ತಾಯ ಮಾಡುತ್ತಿದ್ದೇನೆ. ಆ ಡಾಕ್ಯುಮೆಂಟನೆಲ್ಲಾ ಸರ್ಕಾರ ವಶ-ಪಡಿಸಿಕೊಳ್ಳಬೇಕು. ಆ ಸೆಕ್ರೆಟರಿಯವರನ್ನು ಸಸ್ಪೆಂಡ್ ಮಾಡಬೇಕು. ಹೊಸದಾಗಿ ಪರೀಕ್ಷೆ ಮಾಡುವುದಕ್ಕೆ ಆದೇಶವನ್ನು ಕೊಡಬೇಕು. ಯಾವುದೇ ರೀತಿಯಿಂದ ಸೂಕ್ತವಾದ ಒಂದು ಎನ್‌ಕ್ವೈರಿಯನ್ನು ಮಾಡಬೇಕು ಎನ್ನುವ ಮಾತನ್ನು ಹೇಳಿದ್ದೇವೆ. ಇವತ್ತು ಹೊಸದಾಗಿ ಡಾಕ್ಯುಮೆಂಟ್ ಕೊಡುತ್ತಿದ್ದೇನೆ. ಲಕ್ಷಾಂತರ ಯುವಕರು ಈ ಪರೀಕ್ಷೆಯ ಬಗ್ಗೆ ಪಬ್ಲಿಕ್ ಸರ್ವೀಸ್ ಕಮಿಷನ್ ಬಗ್ಗೆ ಇರುವ ನಂಬಿಕೆ ಹಾಳಾಗುವುದಿಲ್ಲವೆ. ಇಂತಹ ಪರಿಸ್ಥಿತಿ ಬಂದಿರುತ್ತದೆ. ದಯಮಾಡಿ ಸರ್ಕಾರ ಇವತ್ತು ಉತ್ತರ ಕೊಡುವಂತಹ ವ್ಯವಸ್ಥೆ ಮಾಡಬೇಕು.

ಅಧ್ಯಕ್ಷರು : ಮಾನ್ಯ ಸಿಂಧ್ಯರವರು ಮಾತನಾಡಲಿ.

ಶ್ರೀ ವಾಟಾಳ್ ನಾಗರಾಜ್ : ಇದು ಒಂದು ಗಂಭೀರವಾದ ಪ್ರಶ್ನೆ. ಕರ್ನಾಟಕ ಲೋಕಸೇವಾ ಆಯೋಗ ಒಂದು ರೀತಿಯಲ್ಲಿ ದಿವಾಳಿ ಆಗಿದೆ. ಸರ್ಕಾರಕ್ಕೆ ಕಾತುರತೆ ಇರಬೇಕಾಗಿತ್ತು. ಎಷ್ಟು ದಿವಸ ಆಗಿದೆ ಹೇಳಿ? ಸನ್ಮಾನ್ಯ ಉಪ ಮುಖ್ಯಮಂತ್ರಿಗಳು ಒಪ್ಪಿಕೊಂಡಿದ್ದಾರೆ.

ಅಧ್ಯಕ್ಷರು : ಇವತ್ತು ಹೇಳಿಕೆ ಕೊಡುತ್ತಾರೆ.

ಶ್ರೀ ವಾಟಾಳ್ ನಾಗರಾಜ್ : ಈ ಸಭೆಯಲ್ಲಿ ಉತ್ತರ ಕೊಡುವುದಕ್ಕ ಮುಂದೆ ತಳ್ಳತಕ್ಕ ರಾಜಕೀಯ ಏನು? ಇದರ ಹಿಂದೆ ಇರತಕ್ಕ ಒತ್ತಡಗಳು ಏನು? ಸರ್ಕಾರ ಇದನ್ನು ಹೇಳಬೇಕು. ಇದು ಸರಿಯಾದುದು ಅಲ್ಲ. ಈ ಪರಿಸ್ಥಿತಿ ಉದ್ಭವ ಆಗಿರುವಾಗ ಸರ್ಕಾರ ಇದನ್ನು ಇಷ್ಟು ನಿಧಾನ ಮಾಡುವುದು ಸರಿಯಲ್ಲ. ಇದನ್ನು ಲಘುವಾಗಿ ಕಾಣತಕ್ಕದ್ದು ಅಲ್ಲ. ಕೆಪಿಎಸ್‌ಸಿಯಲ್ಲಿ ಬಹಳ ತೀವ್ರವಾದ, ಅಕ್ರಮ, ಅನ್ಯಾಯಗಳು ನಡೆದಿವೆ. ಭ್ರಷ್ಟಾಚಾರ ನಡೆದಿದೆ. ಒಂದು ರೀತಿ ಕೆಪಿಎಸ್‌ಸಿ ಸತ್ತಂತೆ ಇದೆ. ಆದ್ದರಿಂದ, ಸರ್ಕಾರ ಇದುವರೆಗೂ ಇದರ ಬಗ್ಗೆ ಉತ್ತರ ಕೊಡುವುದಕ್ಕೆ ಏಕೆ ಹಿಂದೆ ಮುಂದೆ ನೋಡುತ್ತಿದೆ. ಕಾರಣಗಳು ಏನು? ಇದನ್ನು ಸ್ಪಷ್ಟಪಡಿಸಬೇಕು.

ಶ್ರೀ ಕೆ.ಎಸ್. ಈಶ್ವರಪ್ಪ : ಈ ವಿಳಂಬ ನೀತಿಗೆ ಕಾರಣವೇನು?

ಶ್ರೀ ಬಿ.ಎಸ್. ಯಡಿಯೂರಪ್ಪ : ಎಸ್ಸೈ ಪರೀಕ್ಷೆಯ ಕೋಡ್ ನಂಬರ್ ಈ ರೀತಿ ಇದೆ.

ಅಧ್ಯಕ್ಷರು : ನೀವು ಕಳುಹಿಸಿಕೊಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಇದು ರೆಕಾರ್ಡ್‌ಗೆ ಹೋಗಬೇಕು. ಎಸ್ಸ್ ನಂಬರ್ 0 ಎಎ053492 ; ಇಂಡಿಯನ್ ಹಿಸ್ಟರಿ ನಂಬರ್ ಎಎ 053398, ಸಾಮಾನ್ಯ ವಿಜ್ಞಾನ ನಂಬರ್ ಎಎ 053491. ಈ ಕೆ.ಎ.ಎಸ್. ಬರೆದಿರುವಂಥ ಒರಿಜಿನಲ್ ಉತ್ತರ ಪತ್ರಿಕೆ ನನ್ನ ಹತ್ತಿರ ಇದೆ. ಮೂರನ್ನೂ ಸಹ ಸ್ಪೀಡ್ ಪೋಸ್ಟ್‌ನಲ್ಲೂ ಕಳುಹಿಸಿದ್ದಾರೆ. ಅದರ ಜೆರಾಕ್ಸ್ ಕಾಪಿಯನ್ನು ತಮಗೆ ಕಳುಹಿಸಿಕೊಡುತ್ತಿದ್ದೇನೆ. ದಯಮಾಡಿ ಸರ್ಕಾರ ಈ ಒಂದು ಹೇಳಿಕೆಯಿಂದ ಉತ್ತರ ಕೊಡುವುದಕ್ಕೆ ವ್ಯವಸ್ಥೆ ಮಾಡಬೇಕು. ಸರ್ಕಾರದ ಧೋರಣೆ ಏನು ಹೇಳುತ್ತದೆ? ಏಕೆಂದರೆ ಸೋಮವಾರ ರಿಪ್ಲೈ ಕೊಡುತ್ತೇನೆ ಎಂದು ಹೇಳಿದ್ದರು. ಒಂದೊಂದು ದಿನ ಹೋದರೂ ಡಾಕ್ಯುಮೆಂಟನ್ನೂ ಟ್ಯಾಂಪರ್ ಮಾಡುತ್ತಾರೆ. ಎಲ್ಲಾ ಅವ್ಯವಸ್ಥೆಗೆ ದಯಮಾಡಿ ಸರ್ಕಾರ ಏನು ಹೇಳುತ್ತದೆ ಎಂದು ಕೇಳುತ್ತೇನೆ.

ಶ್ರೀಮತಿ ಮೋಟಮ್ಮ : ನನ್ನದೂ ಸಹ ಗಂಭೀರವಾದ ಪ್ರಶ್ನೆ ಇದೆ.

ಅಧ್ಯಕ್ಷರು : ಅವಕಾಶ ಕೊಡುತ್ತಾರೆ. ಈಗ ಇದರ ಬಗ್ಗೆ ಏನು ಹೇಳುತ್ತಾರೆ?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು) : ಮಾನ್ಯ ಸದಸ್ಯರುಗಳು ಅಪಾದನೆ ಮಾಡಿದ್ದಾರೆ. ತಮಗೂ ಹೇಳಿದ್ದಾರೆ. ಸಂಬಂಧಪಟ್ಟವರಿಗೂ ಹೇಳಿದ್ದಾರೆ ಎನ್ನುವ ಮಾತನ್ನು ಕೂಡ ಇಲ್ಲಿ ಪ್ರಸ್ತಾಪ ಮಾಡಿದ್ದಾರೆ. ನನ್ನ ಒಂದು ವಿನಂತಿ ಎಂದರೆ ಮಾನ್ಯ ಸದಸ್ಯರಲ್ಲಿ, ಒಂದು ನೋಟೀಸ್ ತಮ್ಮ ಮುಖಾಂತರ ಕೊಟ್ಟಿದ್ದರೆ ಸರ್ಕಾರಕ್ಕೆ ಅದು ಬರುತ್ತಿತ್ತು. ಮಾನ್ಯ ಮಂತ್ರಿಗಳ ಗಮನಕ್ಕೂ ಬರುತ್ತಿತ್ತು.

ಶ್ರೀ ಬಿ.ಎಸ್. ಯಡಿಯೂರಪ್ಪ : ನೋಟೀಸ್ ಕೊಟ್ಟಿದ್ದೇವೆ.

ಶ್ರೀ ಕೆ.ಹೆಚ್. ರಂಗನಾಥ್ : ಈ ಸದನದಲ್ಲಿ ಉತ್ತರ ಹೇಳುವುದಕ್ಕೆ ಅನುಕೂಲ ಆಗುತ್ತದೆ. ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದನ್ನು ಸಂಬಂಧಪಟ್ಟ ಮಂತ್ರಿಗಳಿಗೆ ತಿಳಿಸುತ್ತೇನೆ. ಅದು ನನ್ನ ಮಟ್ಟಿಗೆ ಈ ದಿವಸ ಉತ್ತರ ಕೊಡುವುದಕ್ಕೆ ಸಾಧ್ಯ ಆಗಬಾರದು. ನಾನು ಇವೆಲ್ಲಾ ವಿಷಯಗಳನ್ನು ಸಂಬಂಧಪಟ್ಟ ಮಂತ್ರಿಗಳಿಗೆ ತಿಳಿಸುತ್ತೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ : ಸೋಮವಾರ ಉತ್ತರ ಕೊಡುತ್ತೇನೆ ಎಂದು ತಿಳಿಸಿದ್ದರು. ಅಶ್ಯೂರೆನ್ಸ್ ಕೊಟ್ಟು ಮೂರು ದಿವಸ ಆಯಿತು. ಸೋಮವಾರ ಸಾಯಂಕಾಲ ಕೊಡುತ್ತೇನೆ ಉತ್ತರವನ್ನು ಎಂದು ಹೇಳಿದ್ದರು. ಮಾನ್ಯ ಚಂದ್ರೇಗೌಡರು ಒಂದು ಸಲಹೆಯನ್ನು ಕೊಟ್ಟರು. ಅದನ್ನೇ ಲಾಭ ಮಾಡಿಕೊಂಡು ಉತ್ತರ ನೀಡದೇ ಮುಂದೂಡುತ್ತಿದ್ದಾರೆ. 28 ಸಾವಿರ ವಿದ್ಯಾರ್ಥಿಗಳು ಕೆಎಎಸ್ ಎಕ್ಸಾಮಿನೇಷನ್‌ನಲ್ಲಿ ಭಾಗವಹಿಸಿದ್ದಾರೆ. ಅವರ ಜೊತೆ ಚೆಲ್ಲಾಟ ಮಾಡಿದ ಹಾಗೆ ಆಗುತ್ತದೆ. ಇದು ಒಂದು ಕ್ಷಣ ತಡ ಮಾಡುವುದೂ ಸರಿಯಲ್ಲ. ಉತ್ತರ ಕೊಡಿಸಬೇಕು ಎಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಕೆ.ಹೆಚ್. ರಂಗನಾಥ್: ಲಕ್ಷಾಂತರ ಮಂದಿ ಎಂದು ಮಾನ್ಯ ಯಡಿಯೂರಪ್ಪನವರು ತಿಳಿಸಿದರು. 25 ಸಾವಿರ ಮಂದಿ ಇದ್ದಾರೆ. ಅದನ್ನು ನಾನು ಮೇಲೆ ಬರೆದುಕೊಂಡೆ. ಲಕ್ಷಾಂತರ ಹೇಗೆ ಆಯಿತು?

ಶ್ರೀ ಬಿ.ಎಸ್. ಯಡಿಯೂರಪ್ಪ : ಸರ್ಕಾರದ ಧೋರಣೆಯಿಂದ ಬೇಸರ ಆಯಿತು. ಸರ್ಕಾರದ ಬಗ್ಗೆ ವಿಶ್ವಾಸ ಹೋಗುತ್ತದೆ. ಲಕ್ಷಾಂತರ ಯುವಕರ ಭವಿಷ್ಯದ ಜೊತೆ ಚೆಲ್ಲಾಟ ಮಾಡುತ್ತೀರಿ ಎನ್ನುವ ಭಾವನೆ ಬರುತ್ತದೆ ಎಂದು ನಾನು ಹೇಳುತ್ತಿದ್ದೆ.

ಅಧ್ಯಕ್ಷರು : ಮಾನ್ಯ ಮಂತ್ರಿಗಳು ಉತ್ತರ ಕೊಡುತ್ತೇವೆಂದು ಹೇಳಿದ್ದಾರೆ.

ಶ್ರೀ ಕೆ.ಹೆಚ್.ರಂಗನಾಥ್ : ಪತ್ರಿಕೆಯಲ್ಲಿ ನಾನು ಇನ್ನೊಂದು ವರ್ಷನ್ ಓದಿದೆ. ಪರೀಕ್ಷೆಯಲ್ಲಿ ಕುಳಿತಿದ್ದ ವಿದ್ಯಾರ್ಥಿಗಳು ಕೂಡ ಹೇಳಿದ್ದಾರೆ, ಮಾನ್ಯ ಸದಸ್ಯರುಗಳು ಗಮನಿಸಿರಬಹುದು. ಕೆಲವು ಪಾಸಾಗಿರತಕ್ಕವರು ಕೂಡ ಹೇಳಿದ್ದಾರೆ. ಏನು ಎಂದರೆ ವಿಚಾರಣೆ ಮಾಡಲಿ. ನಮ್ಮದು ಏನೂ ಅಭ್ಯಂತರ ಇಲ್ಲ ಎನ್ನುವ ಮಾತನ್ನು ಆಡಿದ್ದಾರೆ. ಮಾನ್ಯ ಸದಸ್ಯರು ಅವ್ಯವಹಾರ ನಡೆದಿದೆ, ಪರೀಕ್ಷೆಯನ್ನು ರದ್ದು ಮಾಡುವ ಬಗ್ಗೆ ತಮ್ಮ ಕಳವಳವನ್ನು ಹೇಳಿದ್ದಾರೆ. ಅದು ಅಷ್ಟು ಸುಲಭವಾದ ಪ್ರಶ್ನೆ ಅಲ್ಲ. 28 ಸಾವಿರ ವಿದ್ಯಾರ್ಥಿಗಳು ಇದ್ದಾರೆ. ಎಲ್ಲರೂ ಕೂಡ ಕಾಪಿ ಹೊಡೆದು ಪಾಸ್ ಮಾಡಿಕೊಂಡಿರುವುದಿಲ್ಲ. ಎಲ್ಲರೂ ಕೂಡ ಭ್ರಷ್ಟಾಚಾರವನ್ನು ಉಪಯೋಗ ಮಾಡಿ ಪಾಸು ಮಾಡಿಕೊಂಡಿರುವುದಿಲ್ಲ. ಜಿನ್ಯೆನ್ ಕೂಡ ಇರುತ್ತಾರೆ. ಸಂಪೂರ್ಣವಾಗಿ ಸಮಗ್ರವಾಗಿ ವಿಚಾರ ಮಾಡಬೇಕಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್ : ನಾವು ಅದನ್ನು ಪ್ರಶ್ನೆ ಮಾಡಲೇ ಇಲ್ಲ. ಯಾರು ಅಕ್ರಮವಾಗಿ, ಭಷ್ಟಾಚಾರ ಮಾಡಿದ್ದಾರೆ ಅವರ ಬಗ್ಗೆ ನಾವು ಹೇಳಿದ್ದುದು.

ಶ್ರೀ ಕೆ.ಹೆಚ್. ರಂಗನಾಥ್ : ನಾನು ವಾದಕ್ಕಾಗಿ ಹೇಳುವುದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ದುಡ್ಡು ಇರುವಂತಹವರು ಮೋಸ ಮಾಡಿ ತೇರ್ಗಡೆಯನ್ನು ಹೊಂದಿದ್ದಾರೆ. ಅವರು ಹೆಚ್ಚು ಮಾರ್ಕ್ಸ್ ಪಡೆದಿದ್ದಾರೆ. 100ಕ್ಕೆ 90 ಜನ ಪ್ರಜ್ಞಾವಂತರು ಉತ್ತರ ಬರೆದಿದ್ದಾರೆ. ಮಾನ್ಯ ರಂಗನಾಥ್ ಅವರು ಹಿರಿಯ ಸಚಿವರಾಗಿರುವವರಿಗೆ ನಾನು ಮನವರಿಕೆ ಮಾಡುತ್ತಿರುವುದು ಎಂದರೆ

ಶ್ರೀ ಕೆ.ಹೆಚ್. ರಂಗನಾಥ್ : ನಾನು ವಾದಕ್ಕೆ ಇಳಿದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : 28 ಸಾವಿರ ವಿದ್ಯಾರ್ಥಿಗಳಲ್ಲಿ ಪ್ರಾಮಾಣಿಕವಾಗಿ ಉತ್ತರ ಬರೆದವರೂ ಇದ್ದಾರೆ. ಯಾರಿಗೆ ಇನ್‌ಫ್ಲೂಯೆನ್ಸ್ ಇದೆ, ರಾಜಕೀಯವಾಗಿ ಯಾರಿಗೆ ಬೆಂಬಲ ಇದೆ, ಕೆಪಿಎಸ್‌ಸಿ ಸದಸ್ಯರ ಬೆಂಬಲ ಇದೆ, ಅಧಿಕಾರಿಗಳನ್ನು ಯಾರು ಸಂಪರ್ಕ ಮಾಡಬಲ್ಲರು, ಯಾರು ಲಕ್ಷಗಟ್ಟಲೆ ದುಡ್ಡು

ಕೊಡಬಲ್ಲರು, ಅವರು ಪ್ರಭಾವ ಬೀರಿ ಮೋಸ ಮಾಡಿ ನಿಜವಾಗಿ ಆಯ್ಕೆ ಆದಂಥವರಿಗೆ ಅಡ್ಡಿ ಮಾಡಿರುವಂಥ ಒಂದು ಅತ್ಯಂತ ದೊಡ್ಡ ದುರಂತ ಇದು. ಕೆ.ಪಿ.ಎಸ್.ಸಿ ಬಗ್ಗೆ ಇರತಕ್ಕಂಥ ವಿಶ್ವಾಸ ಹಾಳಾಗುತ್ತದೆ. ನಾನು ರಿಜಿಸ್ಟರ್ ನಂಬರ್‌ಗಳನ್ನು ಕೊಟ್ಟಿದ್ದೇನೆ. ಇನ್ನೊಂದು ವರ್ಷವಾದರೂ ರಹಸ್ಯ ಸಂಖ್ಯೆಗಳು ಕೋಡ್ ನಂಬರ್ಸ್ ಹೊರಗಡೆ ಬರಕೂಡದು. ಯಾವ ಉತ್ತರ ಪತ್ರಿಕೆ ಯಾವ ಮೌಲ್ಯಮಾಪಕರ ಹತ್ತಿರ ಹೋಗಿದೆ, ಯಾವ ಕಾಲೇಜಿಗೆ ಹೋಗಿದೆ, ಅವರ ವಿಳಾಸಗಳು, ಇವನ್ನೆಲ್ಲಾ ಹರಾಜು ಹಾಕಿ ಲಕ್ಷಗಟ್ಟಲೆ ದುಡ್ಡು ಕೊಟ್ಟು ಉತ್ತರ ಪತ್ರಿಕೆಯನ್ನು ಅನಂತರ ಸೇರಿಸಿಕೊಟ್ಟು ಬಂದಿರುವಂಥ ಪ್ರಶ್ನೆ ಇದೆ. ಮೇಲುಗಡೆ ಯಾರದೇ ಫೋಟೋ ಇದ್ದರೆ ಅದನ್ನು ನೋಡಿ ಹಾಜರಾತಿ ತೆಗೆದುಕೊಳ್ಳುತ್ತಿದ್ದರು. ಈ ರೀತಿಯಾದರೆ ನಾವು ಯಾವ ರೀತಿ ಪರೀಕ್ಷೆ ಬರೆಯಬೇಕೆಂಬ ಪರಿಸ್ಥಿತಿ ವಿದ್ಯಾರ್ಥಿಗಳಲ್ಲಿ ಮೂಡಿದೆ. ನಮ್ಮ ರಕ್ಷಣೆಗೆ ಬರಬೇಕೆಂದು ಹೇಳುತ್ತಿದ್ದೇವೆ. ಇದರ ಬಗ್ಗೆ ಸೋಮವಾರ ಸಾಯಂಕಾಲದೊಳಗಾಗಿ ಉತ್ತರ ಕೊಡುತ್ತೇವೆಂದು ಹೇಳಿದರು. ಮೂರು ದಿವಸಗಳಾಯಿತು ಇನ್ನೂ ಹೇಳಿಕೆ ಕೊಟ್ಟಿಲ್ಲ.

ಅಧ್ಯಕ್ಷರು : ನಿಮಗೆ ರಕ್ಷಣೆ ಬೇಕಾದರೆ ನಾನು ಹೇಳುವುದನ್ನು ತಾವು ಕೇಳಬೇಕು. ಒಂದೇ ಕಡೆಯಿಂದ ಪ್ರವಾಹ ಬಂದರೆ ಕಷ್ಟವಾಗುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಸಚಿವರಾದ ರಂಗನಾಥ್‌ರವರು ಹೇಳಿದಂತೆ 28,000 ವಿದ್ಯಾರ್ಥಿಗಳ ಪ್ರಾಮಾಣಿಕತೆ ಬಗ್ಗೆ ನಮ್ಮ ಪ್ರಶ್ನೆ ಇಲ್ಲ. ಇದು 4000, 5000 ಜನ ಸೇರಿ ಮಾಡಿರುವಂಥ ಮೋಸವಾಗಿದೆ.

ಶ್ರೀ ಕೆ.ಹೆಚ್. ರಂಗನಾಥ್ : ನಾನು ಇವರ ಜೊತೆ ವಾದಕ್ಕೆ ಇಳಿದಿಲ್ಲ. ಪತ್ರಿಕೆಯಲ್ಲಿ ವರದಿಯಾಗಿರುವುದನ್ನು ಈ ಸದನಕ್ಕೆ ಹೇಳಿದ್ದೇನೆ. ನಿಜವಾದ ವಿದ್ಯಾರ್ಥಿಗಳ ವಾದ ಏನಿದೆಯೆಂದು ಹೇಳಿದೆ.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಸಚಿವರು ಹೇಳುವುದಕ್ಕಿಂತ ಮುಂಚಿತವಾಗಿ ನಾನು ಒಂದು ಮಾತು ಹೇಳಲು ಬಯಸುತ್ತೇನೆ. ಯಡಿಯೂರಪ್ಪನವರು ಒಂದು ಮಾತನ್ನು ಹೇಳಿದರು : ಏನೆಂದರೆ, ಚಂದ್ರೇಗೌಡರ ಸಲಹೆಯ ಲಾಭ ಪಡೆದು ಸರ್ಕಾರ ವಿಳಂಬ ಮಾಡುತ್ತಿದೆ, ಮುಂದೂಡುತ್ತಿದೆ ಎಂದು. ಆವೊತ್ತು ಸರ್ಕಾರಕ್ಕೆ ನಾನು ಸಲಹೆ ಕೊಟ್ಟಿದ್ದು, ಇವೊತ್ತು ಕೊಡುವುದು ಮತ್ತು ನಾಳೆ ಕೊಡುವುದು ಅದೇರಿತಿ. ಯಾವುದೇ ಪ್ರಶ್ನೆ ಇಲ್ಲಿ ಬಂದರೆ ತಕ್ಷಣ ನಿರ್ಧಾರಕ್ಕೆ ಬರುವುದಕ್ಕಾಗುವುದಿಲ್ಲ. ನಿರ್ಣಯಕ್ಕೆ ಬದಲು ಏನಾದರೊಂದು ಆಧಾರ ಬೇಕು. ಅದಕ್ಕೋಸ್ಕರ ತನಿಖೆ ಮಾಡಿ ಎಂದು ಮಾನ್ಯ ಹಿರಿಯ ಸಚಿವರಾದ ರಂಗನಾಥರವರು ಹೇಳಿದಂತೆ ತನಿಖೆ ಮಾಡಿ ಎನ್ನುವುದನ್ನು ಇವರೂ ಒಪ್ಪುತ್ತಾರೆ. ಅವರೂ ಒಪ್ಪುತ್ತಾರೆ. ಇದಕ್ಕಾಗಿ ಬೇಡಿಕೆ ಇದೆ. ತನಿಖೆ ಮಾಡುವುದಾದರೆ ಪರೀಕ್ಷೆಯನ್ನು ವಜಾಗೊಳಿಸಿ ಏನು ತನಿಖೆ ಮಾಡುತ್ತೀರಿ?

ಆದುದರಿಂದ, ನಾನು ಹೇಳುವುದೇನೆಂದರೆ, ತನಿಖೆ ಮಾಡಿ, ಯಾರು ಅಪರಾಧವೆಸಗಿದ್ದಾರೋ ಅವರಿಗೆ ಶಿಕ್ಷೆ ವಿಧಿಸಿ. ಇದರ ಬಗ್ಗೆ ಮುಂಚೆಯೇ ತೀರ್ಮಾನ ತೆಗೆದುಕೊಂಡು ಅನಂತರ ತನಿಖೆ ಮಾಡುವುದರಲ್ಲಿ ಅರ್ಥವಿಲ್ಲ. ಮತ್ತು ಇದರಿಂದ

ಲಾಭವಾಗುವುದಾದರೂ ಏನೆಂದು ನನಗೆ ಅರ್ಥವಾಗಬೇಕು. ಈ ತರಹದ ಸಲಹೆ ಅಸಮಂಜಸವೆಂದು ಕಂಡುಬಂದರೆ ಆ ಮಾತು ಬೇರೆ. ಆದರೆ, ಆಗಬೇಕಾಗಿದ್ದು ಏನೆಂದರೆ, ಸಾಯಂಕಾಲದೊಳಗಾಗಿ ಉತ್ತರ ಕೊಡುತ್ತೇವೆಂದು ಹೇಳಿದರು. ಇದರ ಬಗ್ಗೆ ಚರ್ಚೆಯಾಗಿ ಒಂದು ವಾರವಾಯಿತು. ಹಾಗಾದರೆ, ಈ ಸದನಕ್ಕೇನಾದರೂ ಮರ್ಯಾದೆ ಇದೆಯೇ? ಎನ್ನುವಂಥ ಪ್ರಶ್ನೆಯನ್ನೂ ತಮಗೆ ಬಿಡುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಡೀಕೋಡ್ ಮಾಡಬೇಕಾದ ನಂಬರ್ ಅನ್ನು ಬೇರೆಯವರಿಗೆ ಕೊಟ್ಟು ಪಾಸ್ ಮಾಡಿಸಿದ ನಂತರ ತನಿಖೆಯನ್ನು ಏಕೆ ಮಾಡಬೇಕು? ಪರೀಕ್ಷೆಯನ್ನು ವಜಾಮಾಡದೆ ಏನು ತನಿಖೆ ಮಾಡುತ್ತೀರಿ?

ಶ್ರೀ ಸಿ. ಭೈರೇಗೌಡ : ದಯಮಾಡಿ ಇದರ ಬಗ್ಗೆ ಮುಖ್ಯಮಂತ್ರಿಗಳಿಗೆ ತಿಳಿಸಿ, ಅವರಿಂದ ಈ ಕುರಿತು ಹೇಳಿಕೆ ಕೊಡಿಸುವ ವ್ಯವಸ್ಥೆ ಮಾಡಿಸಿದರೆ, ಅವರು ಏನು ಹೇಳುತ್ತಾರೋ ನೋಡೋಣ.

ಅಧ್ಯಕ್ಷರು : ಇವೊತ್ತು ಮುಖ್ಯಮಂತ್ರಿಗಳು ತಮ್ಮ ಹೇಳಿಕೆ ಕೊಡಲಿ. ಹೇಳಿಕೆ ಕೊಟ್ಟ ನಂತರ ನೀವೂ ....

ಶ್ರೀ ಜೆ.ಸಿ. ಮಾಧುಸ್ವಾಮಿ : ಮುಖ್ಯಮಂತ್ರಿಗಳು ತಮ್ಮ ಹೇಳಿಕೆಯನ್ನು ಯಾವಾಗಲೇ ಕೊಡಲಿ. ಇಂತಹ ಮೌಲ್ಯಮಾಪಕರ ಹತ್ತಿರ ಪತ್ರಿಕೆ ಇದೆಯೆಂದು ತಿಪಟೂರಿಗೆ ಹುಡುಕಿಕೊಂಡು ಬಂದು ನಂಬರ್ ಹಾಕಿಸಿಕೊಂಡವರ ತನಿಖೆಯನ್ನು ಹೇಗೆ ಮಾಡುತ್ತೀರಿ? ಕೋಡ್ ಕೊಟ್ಟಿದ್ದು ಅದನ್ನು ಡೀ-ಕೋಡ್ ಮಾಡಬೇಕಾದರೆ ಒಬ್ಬ ವ್ಯಕ್ತಿ ಮಾತ್ರ ಇನ್‌ವಾಲ್ವ್ಡ್ ಆಗಬೇಕು ಮತ್ತು ಒಂದು ವರ್ಷದ ತನಕ ಅದು ಗೌಪ್ಯವಾಗಿರಬೇಕು. ಇವೊತ್ತು ನಾವು ಕೊಟ್ಟಿರುವ ಕೋಡ್ ನಂಬರಿನ ಒರಿಜಿನಲ್ ರಿಜಿಸ್ಟರ್ ನಂಬರ್‌ನ ಉತ್ತರ ಪತ್ರಿಕೆ ತಂದು ಯಡಿಯೂರಪ್ಪನವರು ಅದನ್ನು ನಮ್ಮ ಮುಂದಿಟ್ಟರೆ, ನಂಬರ್ ಹಾಕಿರುವ ಮಾಸ್ತರು ಇಷ್ಟು ಹಾಕಬೇಕಾಗಿತ್ತು, ಇಷ್ಟು ಹಾಕಿದೆಯೆಂದು ಅದನ್ನು ಸಿ.ಓ.ಡಿ. ವರದಿಯಲ್ಲಿ ಸೇರಿಸುವುದಕ್ಕಾಗುತ್ತದೆಯೇ? ಡಿ-ಕೋಡ್ ಆಗಿದೆಯೆಂದರೆ it is a fraud. The whole examination has to be cancelled.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾವು ಈ ಅವ್ಯವಹಾರ ಕುರಿತ ದಾಖಲೆಗಳನ್ನು ಸರ್ಕಾರಕ್ಕೆ ಕೊಟ್ಟು ಮೂರು ದಿವಸಗಳಾಯಿತು. ಹೇಳಿಕೆ ಕೊಡಲು ಸರ್ಕಾರ ಏನು ಮಾಡುತ್ತಿದೆ? ಇದರ ಕುರಿತು ಸೋಮವಾರ ಸಾಯಂಕಾಲ ಉತ್ತರ ಕೊಡುತ್ತೇನೆಂದು ಹೇಳಿದರು. ತಮ್ಮ ಬಗ್ಗೆ ನಮಗೆ ಪೂರ್ಣ ನಂಬಿಕೆ ಇದೆ. ಕೆ.ಪಿ.ಎಸ್.ಸಿ.ಯಲ್ಲಿ ಅವ್ಯವಹಾರ ನಡೆದಿದೆಯೆಂದು ಸಾಬೀತಾಗಿರುವುದರಿಂದ ಸೋಮವಾರ ಸಾಯಂಕಾಲದೊಳಗಾಗಿ ಇದರ ಕುರಿತು ಹೇಳಿಕೆ ಕೊಡುತ್ತೇವೆಂದು ಸನ್ಮಾನ್ಯ ಉಪ ಮುಖ್ಯಮಂತ್ರಿಗಳು ಹೇಳಿದರು. ಈ ರೀತಿ ಹೇಳಿದಾಗ ನಾವು ಯಾವುದೇ ಅಧಿಕಾರಿ ಬಗ್ಗೆ ಸಿ.ಓ.ಡಿ. ತನಿಖೆಗೆ ಹೇಳುತ್ತೇವೆಯೇ ಅಥವಾ ಅವೆಲ್ಲವೂ ಸಾಬೀತಾದ ನಂತರ ತನಿಖೆ ಮಾಡಿ ಎಂದು ನಾವು ಹೇಳುತ್ತೇವೆಯೇ?

ಅಧ್ಯಕ್ಷರು : ಇಲ್ಲಿ ಯಾರ ಪರವಾಗಿಯೂ ಮಾಡುತ್ತಿಲ್ಲ. ಈ ರೀತಿ ಹೇಳಿದರೆ ಕಷ್ಟವಾಗುತ್ತದೆ.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೇ, ಈ ರೀತಿ ಹೇಳಿದರೆ ನಾನೂ ಕೂಡ ಕೆಲವೊಂದು ವಿಚಾರಗಳನ್ನು ಹೇಳಬೇಕಾಗುತ್ತದೆ. ನಾನು ಹೇಳಬಾರದೆಂದು ಸುಮ್ಮನಿದ್ದೇನೆ.

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ : ಇದರಲ್ಲಿ ಭಾಗಿಯಾಗಿರುವ ಕೆಲವು ಪ್ರಮುಖರು ಯಾರೆಂದು ನಮಗೆ ಗೊತ್ತಿದೆ, ಕೆಪಿಎಸ್‌ಸಿ ಅಧ್ಯಕ್ಷರ ಜೊತೆ ಭಾಗಿಯಾಗಿದ್ದಾರೆ, ಯಾರ್ಯಾರ ಮಕ್ಕಳು ಪಾಸಾಗಿದ್ದಾರೆಂದು ಗೊತ್ತಿದೆ, ಕೆಪಿಎಸ್‌ಸಿಯ ಸದಸ್ಯರೂ ಸಹ ಭಾಗಿಗಳಾಗಿ ಪಾಸ್ ಮಾಡಿಸಿಕೊಟ್ಟಿದ್ದಾರೆ, ಇಲ್ಲಿ ಅವ್ಯವಹಾರ ನಡೆದಿದೆ, ದ್ರೋಹ ಮಾಡಿದ್ದಾರೆ.

ಶ್ರೀ ಡಿ.ಬಿ. ಚಂದ್ರೇಗೌಡ : ವಜಾಗೊಳಿಸುವುದಕ್ಕೆ ಈ ಸರ್ಕಾರಕ್ಕೆ ಏನು ಅಧಿಕಾರವಿದೆ? ಈ ಪದವನ್ನು ಬಳಸಬಾರದು. ನಾವು ಪದಗಳನ್ನು ಬಳಸುವುದಕ್ಕೆ ಪ್ರಾರಂಭಿಸಿದರೆ ಅವರೇ ಹೇಳಿದಂತೆ ತಲೆ ಬೋಳಿಸಿಕೊಂಡು ಓಡಿಹೋಗಬೇಕಾಗುತ್ತದೆ.

ಶ್ರೀ ಬಿ.ಎಸ್.ಯಡಿಯೂರಪ್ಪ : ಕೆಪಿಎಸ್‌ಸಿಯಲ್ಲಾಗಿರುವ ಅವ್ಯವಹಾರಕ್ಕೆ ನೀವು ಬೆಂಬಲ ಕೊಡುತ್ತಿದ್ದೀರಿ ಎಂದು ಹೇಳುತ್ತಿದ್ದೇನೆ.

ಅಧ್ಯಕ್ಷರು : ತಾವು ಕುಳಿತುಕೊಳ್ಳಬೇಕು. ಈ ಬಗ್ಗೆ ಮೇಲ್ಮನೆಯಲ್ಲಿಯಾವ ರೀತಿಯ ಕಲಾಪ ನಡೆದಿದೆಯೆಂಬುದು ನನಗೆ ಗೊತ್ತು. ಅವರು ವಕಾಲತ್ತು ವಹಿಸಿ ಮಾತನಾಡಿದರು ಎನ್ನುವ ಪ್ರಶ್ನೆಯಲ್ಲ. ಮುಖ್ಯಮಂತ್ರಿಗಳು ಮೊನ್ನೆ ನಡೆದ ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಇದರ ಬಗ್ಗೆ ಸದನದಲ್ಲಿ ವಿವರಣೆ ಕೊಡುತ್ತೇನೆ, ನಂತರ ಏನಾದರೂ ಸ್ಪಷ್ಟೀಕರಣ ಕೇಳಬಹುದು, ಎಂದು ಹೇಳಿದ್ದಾರೆ. ಆದುದರಿಂದ, ನಾನು ಇನ್ನೊಮ್ಮೆ ಮುಖ್ಯಮಂತ್ರಿಗಳನ್ನು ಕರೆದು ಹೇಳುತ್ತೇನೆ. ತಾವು ಕಳುಹಿಸಿ ಕೊಟ್ಟ ಕಾಗದ ಪತ್ರಗಳು ನನ್ನ ಹತ್ತಿರ ಇದೆ. ಇದರ ಬಗ್ಗೆ ವಿಚಾರ ಮಾಡಿ ತಮ್ಮ ಹೇಳಿಕೆ ಕೊಡಬೇಕೆಂದು ಮುಖ್ಯಮಂತ್ರಿಗಳಿಗೆ ಹೇಳುತ್ತೇನೆ.

ಶ್ರೀ ಸಿ. ಭೈರೇಗೌಡ : ಮಾನ್ಯ ಚಂದ್ರೇಗೌಡರ ಬಗ್ಗೆ ಹೇಳಿರುವ ಮಾತನ್ನು ಕಡತದಿಂದ ಅಧ್ಯಕ್ಷರೆ ತೆಗೆಸಿ ಹಾಕಬೇಕು. ಇಲ್ಲದಿದ್ದರೆ ನಾಳೆ ಪತ್ರಿಕೆಗಳಲ್ಲಿ ಹೋಗುತ್ತದೆ.

ಅಧ್ಯಕ್ಷರು : ಅದನ್ನು ದಾಖಲೆಯಿಂದ ತೆಗೆದು ಹಾಕಿಸುತ್ತೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ : ಅದರ ಬಗ್ಗೆ ನನ್ನ ಹತ್ತಿರ ಸಾಕ್ಷಿಗಳಿವೆ. ಅವರು ಇದರ ಬಗ್ಗೆ ಮಾಡುತ್ತಿದ್ದಾರೆ. ಅವರು ಈ ವ್ಯವಹಾರದ ಬಗ್ಗೆ

ಮಾಡುತ್ತಿದ್ದಾರೆಂದರೆ ತಪ್ಪೇನಿದೆ? ಆ ಶಬ್ದವನ್ನು ಏಕೆ ತೆಗೆಯಬೇಕು? ಆದರೆ ತಾವು ಅದರ ಬಗ್ಗೆ ತೀರ್ಮಾನವನ್ನು ತೆಗೆದುಕೊಂಡರೆ ನಮ್ಮದೇನೂ ಅಭ್ಯಂತರವಿಲ್ಲ.

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ : ಇವರು ಹೇಳಿದ್ದೇ ನ್ಯಾಯವಲ್ಲ.

(ಗೊಂದಲ)

ಶ್ರೀ ಬಿ.ಹೆಚ್. ಬನ್ನಿಕೋಡ್ : ಯಡಿಯೂರಪ್ಪನವರೇನೂ ಬೃಹಸ್ಪತಿಗಳಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ : ನನ್ನ ಹತ್ತಿರ ವಿವರಣೆ ಇದೆ. ಇವರಿಗೆ ಬೇಕಾಗಿರುವವರಿಗೆ ಅಂಕಗಳನ್ನು ಕೊಟ್ಟು ಪಾಸ್ ಆಗಿರುವ ಬಗ್ಗೆ ನನ್ನ ಹತ್ತಿರ ವಿವರ ಇದೆ. ಅದನ್ನೂ ಸಹ ತಮಗೆ ಕೊಡುತ್ತೇನೆ.

(ಗೊಂದಲ)

ಶ್ರೀ ಸಿ. ಭೈರೇಗೌಡ : ಚಂದ್ರೇಗೌಡರು ತಮಗೆ ಬೇಕಾಗಿರುವವರಿಗೆ ಹೆಚ್ಚು ಅಂಕಗಳನ್ನು ಹಾಕಿಸಿ ಪಾಸ್ ಮಾಡಿದ್ದಾರೆಂದು ಅವರು ಆಪಾದನೆ ಮಾಡಿದ್ದಾರೆ. ಅದೂ ಸಹ ಕಡತಕ್ಕೆ ಹೋಗುತ್ತದೆ. ಮಾನ್ಯ ಯಡಿಯೂರಪ್ಪನವರು ಅದನ್ನು ಸಾಬೀತು ಮಾಡಬೇಕಾಗುತ್ತದೆ.

ಶ್ರೀ ಡಿ.ಬಿ. ಚಂದ್ರೇಗೌಡ : ಅವರು ಸಾಬೀತು ಮಾಡಬೇಕು, ಇಲ್ಲದಿದ್ದರೆ ಬರೀ ಇದರ ಸದಸ್ಯತ್ವವಲ್ಲ ನಾನು ರಾಜಕೀಯದಿಂದಲೇ ನಿವೃತ್ತಿಯಾಗುತ್ತೇನೆ. ನಾನು ಸಾರ್ವಜನಿಕ ಜೀವನದಿಂದ ನಿವೃತ್ತಿಯಾಗುತ್ತೇನೆ. ಇವರು ಇಂಥ ಸಣ್ಣತನದಿಂದ ಮಾತನಾಡುತ್ತಾರೆಂದು ತಿಳಿದಿರಲಿಲ್ಲ.

(ಗೊಂದಲ)

ಅಧ್ಯಕ್ಷರು : ಯಾವುದೂ ಕಡತಕ್ಕೆ ಹೋಗುವುದಿಲ್ಲ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಯಡಿಯೂರಪ್ಪನವರು ಬಾಯಿಗೆ ಬಂದಂತೆ ಮಾತನಾಡುತ್ತಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ನಾವು ವಿರೋಧಪಕ್ಷದವರಲ್ಲಿ ಈ ರೀತಿ ಒಬ್ಬರಿಗೊಬ್ಬರು ಬೈದುಕೊಳ್ಳುತ್ತಿದ್ದರೆ ಸರಿಯಾಗುವುದಿಲ್ಲ. ನಾನು ಯಡಿಯೂರಪ್ಪನವರಲ್ಲಿ ಕಳಕಳಿ ಮನವಿ ಮಾಡಿಕೊಳ್ಳುವುದೇನೆಂದರೆ, ತಾವು ಚಂದ್ರೇಗೌಡರ ಬಗ್ಗೆ ಆ ರೀತಿ ಹೇಳುವುದು ಸರಿಯಲ್ಲ.

(ಗೊಂದಲ)

ಶ್ರೀ ಕೆ.ಹೆಚ್. ರಂಗನಾಥ್ : ನನ್ನ ಕ್ರಿಯಾಲೋಪವೇನೆಂದರೆ, ಯಡಿಯೂರಪ್ಪನವರ ಬಗ್ಗೆ ನನಗೆ ಗೌರವವಿದೆ. ಅವರು ಒಂದು ಪಕ್ಷದ ಹಿರಿಯ ಸದಸ್ಯರು ಮತ್ತು ನಾಯಕರು. ಅಲ್ಲದೆ ರಾಷ್ಟ್ರೀಯ ಪಕ್ಷದ ಕಾರ್ಯದರ್ಶಿಗಳು ಕೂಡ. ಹಾಗೆಯೇ ಮಾನ್ಯ ಚಂದ್ರೇಗೌಡರು ಬಹಳ ಹಿರಿಯರು. ಅವರು ಸಾಕಷ್ಟು ದಿನದಿಂದ ಇಲ್ಲಿ ಇದ್ದು ಕೆಲಸ ಮಾಡುತ್ತಿದ್ದಾರೆ. ಅವರು ಬೇರೆ ಬೇರೆ ಹಂತಗಳಲ್ಲಿ ಕೆಲಸ ಮಾಡಿದ್ದಾರೆ. ಅಧ್ಯಕ್ಷರಾಗಿ, ಮಂತ್ರಿಗಳಾಗಿ, ರಾಜ್ಯಸಬೆಯಲ್ಲಿ, ಲೋಕಸಭೆಯ ಸದಸ್ಯರಾಗಿ ಮತ್ತು ಪರಿಷತ್‌ನ ಸದಸ್ಯರಾಗಿ ಸೇವೆ ಸಲ್ಲಿಸಿ ಈಗ ಇಲ್ಲಿದ್ದಾರೆ. ನಮಗೆ ಪುಸ್ತಕದಲ್ಲಿ ಏನೆಲ್ಲ ಮಾಹಿತಿ ಇದ್ದರೆ ಯಾವುದೇ ವ್ಯಕ್ತಿ ಎಷ್ಟು ದೊಡ್ಡವರೇ ಆಗಿದ್ದರೂ ಸಹ ಈ ಸಭೆಯ ಶಿಕ್ಷೆಗೆ ಒಳಪಡಿಸತಕ್ಕ ಅವಕಾಶವಿದೆ. ಆದರೆ ನಿಯಮದ ಪ್ರಕಾರ ಏನು ಮಾಡಬೇಕೆಂದರೆ ಸಂಬಂಧಪಟ್ಟ ದೂರನ್ನು ನಮಗೆ ಬರೆದು ಕಳುಹಿಸಿಕೊಡಬೇಕಾಗುತ್ತದೆ. ಅನಂತರ ಸಮಯ ಕೊಟ್ಟು ಇಲ್ಲಿ ಅದರ ಬಗ್ಗೆ ಕೂಲಂಕುಷವಾಗಿ ಪ್ರಸಾತ್ಪ ಮಾಡಿ ಚರ್ಚೆ ಮಾಡಬೇಕು. Let him be condemned to his heart's content.ಅಷ್ಟರ ಮಟ್ಟಿಗೆ ಪ್ರಸ್ತಾಪ ಮಾಡಬಹುದು. ಆದರೆ ಸುಮ್ಮನೆ ತಮ್ಮ ಔದಾರ್ಯವನ್ನು ಉಪೋಗ ಮಾಡಿಕೊಂಡು ಮಾನ್ಯ ಯಡಿಯೂರಪ್ಪನವರು ಹೇಳಿದರೆ ಸರಿಯಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ - ಅಧ್ಯಕರೇ, ನನ್ನ ಒಂದು ಮಾತು ಏನೆಂದರೆ,...

Sri. K.H. Ranganath : Sir, I am here on your permission. I don't want anybody to interfere me. I am not yielding. ಈ ಸದನ ಬಹಳ ದೊಡ್ಡ ಸದನ, ಇದಕ್ಕೆ ಬಹಳ ಉನ್ನತ ಅಧಿಕಾರವಿದೆ. It is a sovereign body of this State. ಅವರು ವರ್ತಮಾನಕಾಲತ್ತಿನ ಬಗ್ಗೆ ಅಪಾದನೆ ಮಾಡುವಾಗ ಏನೋ ಉದ್ವೇಗದಿಂದ ಮಾತನಾಡುತ್ತಾರೆಂದು ಸುಮ್ಮನಾದೆ. ಆದರೆ ಅವರು ಇನ್ನೂ ಹೆಚ್ಚು ದೂರಕ್ಕೆ ಹೋಗಿದ್ದಾರೆ. ತಾವೂ ಸಹ ಅವರ ಮಾತನ್ನು ಕಡತದಿಂದ ತೆಗೆದು ಹಾಕುತ್ತೇನೆಂದು ಹೇಳಿದ್ದೀರಿ.

12.40 ಪಿ.ಎಂ.

ಆದರೆ ಅವರಿಗೆ ಏನು ಕೋಪ ಬಂತೋ ನನಗೆ ಗೊತ್ತಿಲ್ಲ. ಅದನ್ನು ಪ್ರಸಾತ್ಪ ಮಾಡಿದರು. ಅದು ನನಗೆ ಸಂಬಂಧಪಡುವುದಿಲ್ಲ. ನನ್ನ ಇಚ್ಛೆ ಏನೆಂದರೆ, ಈ ಮಾತು ಕಡತಕ್ಕೆ ಹೋಗಬಾರದು. ಇದರ ಬಗ್ಗೆ ತಮ್ಮಿಂದ ಒಂದು ನಿರ್ಧಾರವಾಗಲೇ ಬೇಕು. ಇಂಥ ಪದಗಳನ್ನು, ಈ ರೀತಿ ಆಪಾದನೆ ಆಗಬಾರದೆಂದು ಆಗಬೇಕು. ಇದರ ಬಗ್ಗೆ ಕ್ರಿಯಾಲೋಪ ಈಗಾಗಲೇ ಆಗಿದೆ. ತಾವು ಈ ಸದನದ ಸದಸ್ಯರಾಗಿ ಕೆಲಸಮಾಡುವಾಗ ಇಂಥ ವಿಚಾರಗಳ ಬಗ್ಗೆ ಪ್ರಸ್ತಾಪ ಮಾಡುವಾಗ ಪಕ್ಷದ ಪ್ರಶ್ನೆ ಬರುವುದಿಲ್ಲ. ಅದು ಅಡ್ಡ ಬರುವುದಿಲ್ಲ. ಈ ಸದನದ ಗೌರವ ಮಾತ್ರಾ ನಮ್ಮ ಕಣ್ಣ ಮುಂದೆ ನಿಲ್ಲುತ್ತದೆ. ಹೀಗಾಗಿ ಆ ರೀತಿಯಾದ ತಪ್ಪು ನಡೆದಾಗ ನಾವು ತಮ್ಮ

ಗಮನಕ್ಕೆ ತರತಕ್ಕದು ನಮ್ಮ ಮತ್ತು ಎಲ್ಲರ ಕರ್ತವ್ಯ. ನಾವು ಇಲ್ಲೀ ಇರಲಿ ಅಲ್ಲೇ ಇರಲಿ ಅದು ಎಲ್ಲರ ಕರ್ತವ್ಯ. ಅದಕ್ಕೆ ತೀರ್ಮಾನ ಕೊಡತಕ್ಕದ್ದು ತಮ್ಮದು. ಮಾನ್ಯ ಯಡಿಯೂರಪ್ಪನವರು ಪ್ರಸ್ತಾಪ ಮಾಡಿದ್ದಾರೆ. ಅವರು ಬುದ್ದಿ ಪೂರ್ವಕವಾಗಿ ಪ್ರಸ್ತಾಪ ಮಾಡುವುದಾದರೆ ತಾವು ಇಂಥದಕ್ಕೆ ತೀರ್ಮಾನವನ್ನು ಕೊಡಬೇಕಾಗುತ್ತದೆ. ಅವರು ಅದರ ಬಗ್ಗೆ ಪ್ರಸ್ತಾಪವನ್ನು ಮಾಡುವುದಾದರೆ ಮೊದಲು ನೋಟೀಸ್ ಕೊಡಲಿ, ಅದರ ದಾಖಲೆ ಅವರಿಗೆ ಹೋಗಲಿ ಅವರಿಗೆ ಬೇಕಾದಂಥ ಅವಕಾಶವನ್ನು ಕೊಡಿ. ಅವರೇನು ಅದರ ಬಗ್ಗೆ ಸಮರ್ಥನೆ ಮಾಡಿಕೊಳ್ಳುತ್ತಾರೋ ಅದನ್ನು ಮಾಡಿಕೊಳ್ಳಲು ಅವಕಾಶ ಕೊಡಿ. ಮತ್ತು ಅವರು ಅದರ ಬಗ್ಗೆ ಪ್ರತಿಪಾದನೆ ಮಾಡುವುದಕ್ಕೆ ಸಹ ಬೇಕಾದರೆ ಅವಕಾಶ ಕೊಡಿ. ಆದರೆ ಅವರು ಉದ್ವೇಗದಲ್ಲಿ ಇದ್ದಕ್ಕಿದ್ದಂತೆ ಎದ್ದುನಿಂತು ಕೋಪದಲ್ಲಿ ಯಾರದೋ ಬಗ್ಗೆ ಅಪಾದನೆ ಮಾಡತಕ್ಕದ್ದು ಸರಿಯಲ್ಲ. ಇದು ನನ್ನ ಕ್ರಿಯಾಲೋಪ.

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ : ಅಧ್ಯಕ್ಷರೇ, ನಾನು ಏನು ಹೇಳಿದ್ದೇನೆ ಎಂಬ ಬಗ್ಗೆ ದಾಖಲೆಯಿಂದ ಸ್ಪಷ್ಟವಾಗಬೇಕಾಗುತ್ತದೆ. ಮಾನ್ಯ ರಂಗನಾಥ್‌ರವರು ಕ್ರಿಯಾಲೋಪವೆತ್ತಿದ್ದಾರೆ. ನಾನೇನು ಹೇಳಿದ್ದೇನೆ ಎಂಬುದನ್ನು ತಮ್ಮ ಗಮನಕ್ಕೆ ಭಿನ್ನವಿಸಿಕೊಳ್ಳುತ್ತೇನೆ.

(ಗೊಂದಲ)

*ಶ್ರೀ ಪಿ. ಜಿ. ಆರ್. ಸಿಂಧ್ಯ : ಸನ್ಮಾನ್ಯ ಅಧ್ಯಕ್ಷರೇ, ವಿರೋಧ ಪಕ್ಷದ ನಾಯಕರು ಇಲ್ಲದೆ ಇರುವಾಗ ತಾವು ವಿರೋಧ ಪಕ್ಷದ ನಾಯಕ ಎಂದು ನನ್ನನ್ನು ಗುರುತು ಮಾಡಿದ್ದೀರಿ. ನಾನು ಮಾತನಾಡಲು ಎದ್ದು ನಿಂತಾಗ, ತಾವು ನನಗೆ ಸಮಯವನ್ನು ಕೊಟ್ಟಾಗಲೂ ಸಹ, ನಮ್ಮ ಮಾನ್ಯ ಸದಸ್ಯರಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ. ನಮ್ಮ ಪಕ್ಷದ ಅಭಿಪ್ರಾಯವನ್ನು ಹೇಳಬೇಕಾಗುತ್ತದೆ. ಮಾನ್ಯ ರಂಗನಾಥ್‌ರವರು ಕ್ರಿಯಾಲೋಪವನ್ನೇನು ಎತ್ತಿ ಹಿಡಿದಿದ್ದಾರೆ ಅದನ್ನು ಸಮರ್ಥಿಸಿ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ.

ಮೊದಲನೆಯದಾಗಿ, ಕೆಪಿಎಸ್‌ಸಿ ಯಲ್ಲಾಗಿರುವ ಆಯ್ಕೆಯ ಬಗ್ಗೆ ವಿಚಾರಣೆಯಾಗಬೇಕು. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಒಂದು ಹೇಳಿಕೆಯನ್ನು ಇಲ್ಲಿ ಕೊಡಬೇಕು, ಮತ್ತು ಇಂಥ ಸಮಸ್ಯೆಗಳ ಬಗ್ಗೆ ಇಲ್ಲಿ ಚರ್ಚೆ ಮಾಡುವುದರಿಂದ ಪ್ರಜಾತಂತ್ರದ ವ್ಯವಸ್ಥೆಗೆ ಅಗತಕ್ಕ ಧಕ್ಕೆಯ ಬಗ್ಗೆ ಸಂಪೂರ್ಣವಾಗಿ ಚರ್ಚೆ ಮಾಡಿದ್ದೇವೆ. ಮಾನ್ಯ ದೇಶಪಾಂಡೆಯವರು, ನಾನು ಭೈರೇಗೌಡರು ತಾವೆಲ್ಲರೂ ಸಹ ವಿಚಾರಣೆಯಾಗಬೇಕೆಂದು ಹೇಳಿದ್ದೇವೆ. ಆದ್ದರಿಂದ ಇಲ್ಲಿ ವಕಾಲತ್ತು ಎನ್ನತಕ್ಕಂಥ ಪ್ರಶ್ನೆ ಏಕೆ ಬರುತ್ತದೆ ಎನ್ನತಕ್ಕದ್ದು ನನಗೆ ಅರ್ಥವಾಗುತಿಲ್ಲ. ಈಗ ಕೇವಲ ಪ್ರಚಾರಕೋಸ್ಕರವೋ ಅಥವಾ ರಾಜಕೀಯ ಉದ್ದೇಶಕ್ಕೋಸ್ಕರವೋ ಹಿರಿಯ ಸದಸ್ಯರಾಗಿರತಕ್ಕಂಥ ಚಂದ್ರೇಗೌಡರಿಗೆ ಈ ರೀತಿ ಆಪಾದನೆ ಮಾಡುವುದು ಸರಿಯಲ್ಲ. ನೀವು ಹತ್ತು ವರ್ಷಗಳಿಂದ ಗೆದ್ದು ಬಂದಿದ್ದೀರಿ. ನನ್ನ ಮೇಲು ಅಪಾದನೆಗಳು ಬರುತ್ತವೆ. ನಿಮ್ಮ ಮೇಲೂ ಅಪಾದನೆಗಳು ಬರುತ್ತವೆ. ಆ ರೀತಿ ಅಪಾದನೆಗಳು ಬಂದಂಥ ಸಂದರ್ಭದಲ್ಲಿ ಇಲ್ಲಿ ನಾವೇ ಸದನದ ಎಲ್ಲಾ ಸದಸ್ಯರುಗಳು ಕುಳಿತುಕೊಂಡು

ಒಂದು ಪುಸ್ತಕವನ್ನು ಮಾಡಿಕೊಂಡಿದ್ದೇವೆ. ಯಾವ ರೀತಿ ನಿಯಮಗಳನ್ನು ಅನುಸರಿಸಿಕೊಂಡು ಹೋಗಬೇಕು ಎಂಬ ಬಗ್ಗೆ ಪುಸ್ತಕವನ್ನು ಮಾಡಿಕೊಂಡಿದ್ದೇವೆ. ನಿಯಮಾವಳಿಗಳ ಪ್ರಕಾರವಾಗಿ ಚಂದ್ರೇಗೌಡರು ತಪ್ಪಿತಸ್ಥರು ಎನ್ನುವುದನ್ನು ಮಾಡುವುದಕ್ಕಾಗಿ ತಮ್ಮ ಹತ್ತಿರ ಪತ್ರವನ್ನು ಬರೆದು ಈ ರೀತಿ ಮಾಡಿದ್ದಾರೆಂದು ಹೇಳಬಹುದು. ನೀವು ಈ ರೀತಿ ಇಪತ್ತು ಎದ್ದು ನಿಂತು ಬೇರೆ ಬೇರೆ ವಿಚಾರಗಳನ್ನು ಪ್ರಸ್ತಾಪ ಮಾಡುತ್ತೇನೆಂದು ಹೇಳಿದ್ದೀರಿ. ಆದರೆ ನೀವು ಈ ವಿಚಾರವನ್ನು ಪ್ರಸ್ತಾಪ ಮಾಡಲೇ ಇಲ್ಲ. ಅನಂತರ ವಕಾಲತ್ತು ಎಂದು ಹೇಳಿದಿರಿ. ನಿಮಗೇನು ರಕ್ತದ ಒತ್ತಡದ ಖಾಯಿಲೆ ಇದೆಯೇನೋ ನನಗೆ ಗೊತ್ತಿಲ್ಲ. ನನಗೆ ಸ್ವಲ್ಪ ಇದೆ. ನಿಮಗೆ ಸ್ವಲ್ಪ ಜಾಸ್ತಿ ಇದೆಯೆಂದು ಕಾಣುತ್ತದೆ. ಆದ್ದರಿಂದ ಏನೋ ಒಂದ ಆವೇಶದಲ್ಲಿ ಕೆಪಿಎಸ್‌ಸಿ ಯಲ್ಲಿ 28 ಸಾವಿರ ಜನರು ಪರೀಕ್ಷೆಗೆ ಕುಳಿತುಕೊಂಡಿದ್ದಾರೆ. ಯಾರು ಏಸಿಯಾದರೇನು? ಯಾರು ತಹಶೀಲ್ದಾರರಾದರೇನು, ಇವರುಗಳೆಲ್ಲ ಮಾಡುವುದು ಅಷ್ಟರಲ್ಲೇ, ಅದನ್ನು ನಾವುಗಳೆಲ್ಲರೂ ನೋಡಿದ್ದೇವೆ. ಯಾರು ಅಧಿಕಾರಿಗಳು ಮಂತ್ರಿಗಳು ಇರುತ್ತಾರೆ ಅವರ ಬಾಲವನ್ನು ಇಟ್ಟುಕೊಂಡು ತಿರುಗಾಡುತ್ತಿರುತ್ತಾರೆ. ಅಧಿಕಾರಿ ಹೋದಮೇಲೆ ಮೂಸಿಯೂ ನೋಡುವುದಿಲ್ಲ. ತಪ್ಪಿಸಿಕೊಂಡು ಓಡಾಡುತ್ತಾರೆ, ಇದಲ್ಲಾ ನಮಗೆ ಗೊತ್ತಿರುವ ವಿಚಾರ. ಇವರುಗಳ ಬಗ್ಗೆ ನಮಗೇನೂ ಕರುಣೆ ಇಲ್ಲ. ಅಥವಾ ಇದರ ಬಗ್ಗೆ ನ್ಯಾಯಾಂಗತನಿಖೆಯಾಗಬಾರದೆಂದೂ ಸಹ ನಾನು ಹೇಳುವುದಿಲ್ಲ . ನಾವೆಲ್ಲರೂ ಸಹಿತ ನಮ್ಮ ಪಕ್ಷದಿಂದ ಒಂದು ಖಚಿತವಾದ ನಿರ್ಧಾರವನ್ನು ಹೇಳಿದ್ದೇವೆ. ಅಲ್ಲಿ ಒಬ್ಬರು ಡಿವೈಎಸ್‌ಪಿ ಹೋಗಿ ವಿಚಾರಣೆ ಮಾಡುವುದು ಬೇಡ. ದುರ್ದೈವದಿಂದ ಇ ಕೆಪಿಎಸ್‌ಸಿ ಸದಸ್ಯರೆನ್ನೆಲ್ಲಾ ನಾವು ಸಿವಿಲ್ ಸರ್ವಿಸ್‌ನಲ್ಲಿ ಎತ್ತರಕ್ಕೆ ಬೆಳೆದಿರತಕ್ಕ ಜನರನ್ನು, ಬೇರೆ ಬೇರೆ ಎಜ್ಯುಕೇಷನ್ ಫೀಲ್ಡ್‌ನಲ್ಲಿ ಬಹಳ ಎತ್ತರಕ್ಕೆ ಬೆಳೆದಿರತಕ್ಕ ಜನರನ್ನು, ಸಾರ್ವಜನಿಕ ಜೀವನದಲ್ಲಿ ಎತ್ತರಕ್ಕೆ ಬೆಳೆದಿರತಕ್ಕವರನ್ನು ಸದಸ್ಯರನ್ನಾಗಿ ಮಾಡಿದ್ದೇವೆ . ಅವರುಗಳನ್ನು ಡಿವೈಎಸ್‌ಪಿ ಯವರು ಹೋಗಿ ವಿಚಾರಣೆ ಮಾಡುವುದು ಸರಿಯಲ್ಲ. ಒಬ್ಬರು ಹೈಕೋರ್ಟ್ ಸಿಟ್ಟಿಂಗ್ ಜಡ್ಜ್‌ನಿಂದ ವಿಚಾರಣೆ ಮಾಡಿಸಿ ಎಂದು ಹೇಳಿದ್ದೇವೆ. ಸಿಂಧ್ಯಾರವರದ್ದು, ಚಂದ್ರೇಗೌಡರದ್ದು ಮತ್ತು ಮತ್ತೊಬ್ಬರದ್ದೂ ಸಹ ಬರಲಿ. ಆದರೆ ಇದರಲ್ಲಿ ಮತ್ತೊಂದು ಆಗಿದೆ. ಅದನ್ನು ಸರ್ಕಾರದ ಮಾನ್ಯ ಮಂತ್ರಿಗಳ ಗಮನಕ್ಕೆ ತರುತ್ತಿದ್ದೇವೆ ಈ ಸದನದಲ್ಲಿ ಚರ್ಚೆಯಾದಮೇಲೆ ಮುಖ್ಯಮಂತ್ರಿಗಳು ಇದರ ಬಗ್ಗೆ ಸದನಕ್ಕೆ ಉತ್ತರವನ್ನು ಕೊಡುತ್ತೇನೆಂದು ಭರವಸೆಯನ್ನು ಕೊಟ್ಟರು . ಯಾವ ಕಾರಣದಿಂದಲೋ ಉತ್ತರವು ತಡವಾಗುತ್ತಿದೆ. ಈ ಮಧ್ಯ ಕೆಪಿಎಸ್‌ಸಿ ನವರು ಒಂದು ಪತ್ರಿಕಾ ಹೇಳಿಕೆಯನ್ನು ಕೊಟ್ಟು ಸಸ್ಪಷ್ಟವಾದ ವಿವರಣೆಯನ್ನು ಕೊಟ್ಟಿದ್ದಾರೆ. I think that amounts to the privilege of all of us. ಅವರಿಗೆ ಹಕ್ಕುಚ್ಯುತಿಯ ಪ್ರಶ್ನೆ ಬರುತ್ತದೆ. ನಾನು ಅದರ ಬಗ್ಗೆ ಯೋಚನೆ ಮಾಡುತ್ತಿದ್ದೇನೆ, ಹಕ್ಕುಚ್ಯುತಿಯನ್ನು 7ನೇ ತಾರೀಖಿನೊಳಗೆ ಸದನಕ್ಕೆ ಕಳುಹಿಸಿಕೊಡಬೇಕೆಂದು ನೋಡುತ್ತಿದ್ದೇನೆ. ಇವರಿಗೆ ಮಾಡಲು ಹಕ್ಕು ಇದೆಯೇ? ಇವರು ಯಾರು? ಹಾಗಾದರೆ ಸದಸ್ಯರಾದ ನಾವು ಇದನ್ನು ಏನಾದರೂ ಅಲ್ಲಿ ಎತ್ತಿದರೆ ಅಧಿಕಾರಿಗಳಿಗೆ ವಿವರಣೆಯನ್ನು ಕೊಟ್ಟುಕೊಂಡು ಪೇಪರ್‌ನಲ್ಲಿ ಹೇಳಿಕೆಗಳನ್ನು ಕೊಡುವುದಾದರೆ ಈ ಸದನ ಏಕೆ ಇರಬೇಕು? ನಾವು ಏಕೆ ಇರಬೇಕು. ಕೆಪಿಎಸ್‌ಸಿ ಯ ಕಾರ್ಯದರ್ಶಿಯವರು ಒಂದು ಸ್ಪಷ್ಟಣೆಯನ್ನು, ವಿವರಣೆಯನ್ನು ಪತ್ರಿಕೆಗಳ ಮೂಲಕ ಕೊಟ್ಟಿದ್ದಾರೆ. ಈ ರೀತಿ

ಕೊಡಬಹುದೇಎಂಬುದರ ಬಗ್ಗೆ ತಮ್ಮ ಅಭಿಪ್ರಾಯವನ್ನು ತಿಳಿಸುವುದು ಅಗತ್ಯವಾಗಿವೆ. ನಾವು ಇದರ ಬಗ್ಗೆ ಸಮಾಲೋಚನೆ ಮಾಡಿ, ನಿಯಮಗಳನ್ನು ಓದಿ ವಿರೋಧ ಪಕ್ಷದ ಇತರೇ ಮುಖಂಡರ ಜೊತೆಯಲ್ಲಿ ತಮ್ಮ ಗಮನಕ್ಕೆ ತರುತ್ತೇನೆ. ನಾನು ಮಾನ್ಯ ಯಡಿಯೂರಪ್ಪನವರಲ್ಲಿ ವಿನಂತಿ ಮಾಡಿಕೊಳ್ಳುವುದು ಇಷ್ಟೆಲ್ಲವನ್ನು ಸಹಿತ ಅವರ ವೈಯಕ್ತಿಕವಾದ ವ್ಯಕ್ತಿತ್ವದ ಮೇಲೆ ಅದು ಆಗುತ್ತದೆ . ಚಂದ್ರೇಗೌಡರರ ವೈಯಕ್ತಿಕವಾದ ವ್ಯಕ್ತಿತ್ವದ ಮೇಲೆ ಇದು ಸ್ಪಷ್ಟವಾಗಿ ಆಗುತ್ತದೆ. ಇದು ನಮ್ಮ ಮನಸ್ಸಿಗೆ ನೋವನ್ನು ತರತಕ್ಕಂಥದ್ದು, ಗಂಟಲು ಹರಿದುಕೊಳ್ಳುವುದು, ಕಿರಿಚಿಕೊಳ್ಳುವುದು, ಅದೆಲ್ಲಾ ಇದೆ. ಇನ್ನು 15 ದಿವಸದಿಂದ ಶುರುವಾಗುತ್ತದೆ ಎಲೆಕ್ಷನ್ ಅನೌನ್ಸ್ ಆದಮೇಲೆ ಅದನ್ನು ಮಾಡಿಕೊಳ್ಳೋಣ . ಇನ್ನು ನಾಲ್ಕೈದು ದಿವಸ ಇಲ್ಲಿ ಕುಳಿತಿರುತ್ತೇವೆ. ಅದಾದ ಮೇಲೆ ಇಲ್ಲಿ ಮತ್ತೆ ಯಾರು ವಾಪಸ್ ಬರುತ್ತೀರೋ ಅಲ್ಲಿ ಯಾರು ಇರುತ್ತೀರೋ ನಾವೆಲ್ಲಿ ಇರುತ್ತೇವೋ ನೋಡೋಣ. ಅದನ್ನೇನೂ ಮಾಡುವುದು ಬೇಡ. ನಾನೇನು ಹೇಳುತ್ತೇನೆ , ಅವರ ವ್ಯಕ್ತಿತ್ವವನ್ನು ಹಾಳು ಮಾಡಲಿಕ್ಕೆ, ನಮ್ಮ ಪಕ್ಷವನ್ನು ಹಾಳು ಮಾಡಲ್ಲಿಕ್ಕೆ, ಮಾಡುತ್ತಿರತಕ್ಕಂಥ ಒಂದು ಪ್ರಯತ್ನ. ನಮ್ಮನ್ನು ಇಕ್ಕಟ್ಟಿಗೆ ಸಿಕ್ಕಿಸಿಹಾಕಬೇಕು. ಅದೊಂದು ಬಿಜೆಪಿ ಯವರು ಮತ್ತೆ ನಮ್ಮ ಯಡಿಯೂರಪ್ಪನವರ ತಂತ್ರ. ದಯವಿಟ್ಟು ತಾವು ಇದನ್ನು ಮಾಡುವುದಕ್ಕೆ ಹೋಗಬೇಡಿ. ಒಬ್ಬ ಗೌರವಾನ್ವಿತ ಸದಸ್ಯರು ಅದು ಯಾರೇ ಆಗಿರಲಿ, ಚಂದ್ರೇಗೌಡರು ಎಂದು ನಾನು ಹೇಳುವುದಿಲ್ಲ ಯಾರೇ ಇರಬಹುದು. ಒಬ್ಬರನ್ನು ಇಕ್ಕಟ್ಟಿಗಿ ಸಿಕ್ಕಿಹಾಕಿಸಿ ಅದರಿಂದ ನಿಮ್ಮಪಕ್ಷಕ್ಕೆ ಏನಾದರು ಬಂಡವಾಳ ಸಿಗುತ್ತದೆ ಎಂದು ತಿಳಿದುಕೊಂಡಿದ್ದರೆ ನನಗನಿಸುತ್ತದೆ, ಅದರಿಂದ ನಿಮಗೆ ಏನು ಬಂಡವಾಳ ಸಿಗುವುದಿಲ್ಲ . ದಯಮಾಡಿ ನೀವು ಕ್ಷಮಾಪಣೆಯನ್ನು ಕೇಳಬೇಕು. ಮತ್ತೆ ತಾವು ಇದನ್ನು ಕಡತದಲ್ಲಿ ಅವಕಾಶ ಕೊಡಬಾರದು ನಿಯಾಮಾವಳಿಗಳ ಪ್ರಕಾರವಾಗಿ. ನಾನು ಸ್ವಾಗತ ಮಾಡುತ್ತೇನೆ. ನಮ್ಮ ಪಕ್ಷದಿಂದ ಸ್ವಾಗತ ಮಾಡುತ್ತೇವೆ. ನ್ಯಾಯಾಂಗ ತನಿಖೆ ಮಾಡಿ. ಎಲ್ಲಾ ತನಿಖೆಯನ್ನೂ ಮಾಡಿ. ನಿಮಗೆ ಏನು ಪುರಾವೆ ಅದು ಇದು ಇದೆ ಎಂದು ಹೇಳುತ್ತಿದ್ದೀರಲ್ಲಾ, 7ನೇ ತಾರೀಖಿನವರೆಗೂ ಸದನ ಇದೆ. ತೆಗೆದುಕೊಂಡು ಬನ್ನಿ ಸದಸ್ಯರ ಹತ್ತಿರ , ಚರ್ಚೆ ಮಾಡೋಣ. ಈಗ ಸಾಂಡ್ರಾರವರ ಬಗ್ಗೆ ನಾವು ನೇರವಾಗಿ ಸಾಂಡ್ರಾರವರಿಗೆ ಮತ್ತು ತಮಗೆ ವಿಷಯವನ್ನು ತಿಳಿಸಿ ಪ್ರಸ್ತಾಪ ಮಾಡಿದ್ದೇವೆ. ಆ ರೀತಿ ತಾವು ಮಾಡಿ.

ಶ್ರೀ ಬಿ. ಎಸ್. ಯಡಿಯೂರಪ್ಪ : ನನಗೆ ಚಂದ್ರೇಗೌಡರ ಬಗ್ಗೆ ಪೂರ್ಣ ಗೌರವ ಇದೆ. ನನ್ನದು ಇಷ್ಟೆ ಮಾತು. ನಾನು ಅವರಿಗೆ ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ. ನೀವು ವಹಿಸುತ್ತಿದ್ದೀರಿ ಎಂದು ಹೇಳಿದ್ದು ನಿಜ. ನಾನು ಏತಕ್ಕೆ ಹೇಳಿದೆ? ದೇಶ್‌ಪಾಂಡೆಯವರು ಅವತ್ತು ಮಾತಾನಾಡುವ ಸಂದರ್ಭದಲ್ಲಿ ಪರೀಕ್ಷೆಯನ್ನು ವಿರೋಧಪಕ್ಷದ ನಾಯಕರಾಗಿ ವಜಾ ಮಾಡಿ, ಮರುಪರೀಕ್ಷೆ ಮಾಡಿ ಎನ್ನುವುದು ದಾಖಲೆಯಲ್ಲಿದೆ. ನಮಗೆ ಮಾತನಾಡುವುದಕ್ಕೂ ಅವಕಾಶವಿಲ್ಲವೇನು?

(ಗೊಂದಲ)

ಶ್ರೀ ಕೆ.ಬೆಚ್. ರಂಗನಾಥ್ : ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ ಎಂದರೆ ಏನರ್ಥ?

ಶ್ರೀ ಬಿ.ಎಸ್. ಯಡಿಯೂರಪ್ಪ : ಎಂದರೆ ಅವರ ಪರವಾಗಿ ನಿಂತಿದ್ದೀರಾ ಎಂದರ್ಥ. ನೀವು ಬೇಡ ತೆಗೆದುಹಾಕುವುದಕ್ಕೂ ಸಾಧ್ಯವಿಲ್ಲ. ಅಧ್ಯಕ್ಷರಿಗೆ ಪೂರ್ಣ ಅವಕಾಶವಿದೆ.

Sri K.H. RANGANATH:- I take very strong objection to the use of the word. It should not go into the record at all. It should not go into the record at all.

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ : ಯಾವುದು ಅಲ್‌ಪಾರ್ಲಿಮೆಂಟರಿ ಪದ ಇದೆ. ಅದನ್ನು ತೆಗೆದುಹಾಕಿ ದಾಖಲೆಯಿಂದ. ತಮಗೆ ಪೂರ್ಣ ಅಧಿಕಾರವಿದೆ.

(ಗೊಂದಲ)

ಅಧ್ಯಕ್ಷರು: ತಾವು ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

(ಗೊಂದಲ)

ಅಧ್ಯಕ್ಷರು: ನನಗೆ ಏಕೋ ಇವತ್ತಿನ ಈ ಕಲಾಪದ ನಡವಳಿಕೆ ನಾವು ಹೋಗುತ್ತಿದ್ದೇವೆ, ಇದು ಕೊನೆಯ ಹಂತದಲ್ಲಿ ನಾವು ಈ ರೀತಿ ಮಾಡುವುದು ನನಗೆ ಸರಿ ಅನಿಸುತ್ತಿಲ್ಲ. ನನ್ನ ಕೊಠಡಿಗೆ ತಮ್ಮೆಲ್ಲರನ್ನೂ ಕರೆಯುತ್ತೇನೆ. ಸ್ವಲ್ಪ ಚರ್ಚೆ ಮಾಡೋಣ, ತಾವು ಬನ್ನಿ ಈಗ ಕಲಾಪಗಳನ್ನು ಒಂದು ಗಂಟೆ ಮುಂದೆ ಮಾಡಿ ಎರಡು ಗಂಟೆಗೆ ಕೂಗುತ್ತೇನೆ. ಮಾನ್ಯ ವಾಟಾಳ್ ನಾಗರಾಜ್‌ರವರು ಯಡಿಯೂರಪ್ಪನವರು , ಭೈರೇಗೌಡರು, ಚಂದ್ರೇಗೌಡರು, ಸಿಂಧ್ಯಾರವರು ಎಲ್ಲರೂ ಬನ್ನಿ.

ಶ್ರೀ ಡಿ. ಬಿ. ಚಂದ್ರೇಗೌಡ : ನನಗೇನೂ ಅಗತ್ಯವಿಲ್ಲ. ಅಧ್ಯಕ್ಷರೇ.
ಶ್ರೀ ಬಿ.ಎಸ್. ಯಡಿಯೂರಪ್ಪ : ನನಗೂ ಅಗತ್ಯವಿಲ್ಲ ಅಧ್ಯಕ್ಷರೇ

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ :- ಯಾರು ಅವರ ಪರ ಇದ್ದಾರೆ, ಯಾರು ಹತ್ತಿರದವರು ಇದ್ದಾರೆ, ಅದನ್ನೂ ಚರ್ಚೆ ಮಾಡೋಣ. ನೋಟಿಸ್ ಕಳುಹಿಸುತ್ತೇನೆ. ನಾನು ನಿಮಗೆ ವಿಶೇಷವಾಗಿ ನೋಟಿಸ್ ಕಳುಹಿಸಿ. ತಮ್ಮ ಅನುಮತಿಯನ್ನು ಪಡೆಯುತ್ತೇನೆ.

ಅಧ್ಯಕ್ಷರು : ಸಭೆ ಸದನವನ್ನು ಈಗ 1 ಗಂಟೆ ಕಾಲ ಮುಂದುಡುತ್ತೇನೆ. ಸದನವು ಮತ್ತೆ 2 ಗಂಟೆಗೆ ಸೇರುವುದು.

ಸದನವು ಮಧ್ಯಾಹ್ನ 3 ಗಂಟೆ 20 ನಿಮಿಷಕ್ಕೆ ಸೇರಿತು. ಸಭೆಯ ಅಧ್ಯಕ್ಷತೆಯನ್ನು ಅಧ್ಯಕ್ಷರು ಶ್ರೀ ಎ.ಎಸ್. ಕೌಜಲಗಿಯವರು ವಹಿಸಿದ್ದರು.

ಶ್ರೀ ವಾಟಾಳ್ ನಾಗರಾಜ್ : ಅಧ್ಯಕ್ಷರೇ ಇದು ಬೆಳಿಗ್ಗೆ ಲೋಕಸೇವಾ ಆಯೋಗದ ಬಗ್ಗೆ ಚರ್ಚೆ ನಡೆಯುವಾಗ ಶ್ರೀ ಯಡಿಯೂರಪ್ಪ ಮತ್ತು ಚಂದ್ರೇಗೌಡರ ಮಧ್ಯೆ ಕೆಲವು ಮಾತುಗಳು ನಡೆದಿವೆ. ಆ ಬಗ್ಗೆ ನಾವು ತಮ್ಮ ಕೊಠಡಿಯಲ್ಲಿ ಕುಳಿತು ಒಳ್ಳೆಯ ವಾತಾವರಣದಲ್ಲಿ ಸಭೆ ನಡೆಸಬೇಕೆಂದು ತಮ್ಮ ಅಪ್ಪಣೆ ಪ್ರಕಾರ ಒಂದು ತೀರ್ಮಾನಕ್ಕೆ ಬಂದಿದ್ದೇವೆ. ಈ ಸಂದರ್ಭದಲ್ಲಿ ಮಾನ್ಯ ಯಡಿಯೂರಪ್ಪನವರು ಕೆಲವು ಮಾತು ಆಡಬೇಕೆಂದು ತಮ್ಮ ಮೂಲಕ ಕೋರುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅಧ್ಯಕ್ಷರೇ, ಬಹಳ ಪ್ರಮುಖವಾದಂತಹ ಲೋಕಸೇವಾ ಆಯೋಗದ ಬಗ್ಗೆ ಚರ್ಚೆ ನಡೆದಿದ್ದಾಗ ಕೆಲವು ಘಟನೆಗಳು ನಡೆದವು. ನನಗೆ ಚಂದ್ರೇಗೌಡರ ಬಗ್ಗೆ ಗೌರವ ಇದೆ, ಅವರಿಗೆ ನೋವು ಮಾಡಬೇಕೆಂಬ ಅಪೇಕ್ಷೆ ಎನೂ ಇರಲಿಲ್ಲ. ನಾನೇನು ಚಂದ್ರೇಗೌಡರ ಬಗ್ಗೆ ಮಾತನಾಡಿದ್ದೇನೆ ಅದನ್ನೆಲ್ಲಾ ತಾವು ಕಡತದಿಂದ ತೆಗೆದುಹಾಕಿದ್ದೀರಿ. ನಾನೂ ಸಹ ವಾಪಸ್ ಹಿಂತೆಗೆದುಕೊಳ್ಳುತ್ತೇನೆ. ಮತ್ತು ಅವರಿಗೆ ಏನು ನೋವಾಗಿದೆ ಅದರ ಬಗ್ಗೆ ಈ ಸಂದರ್ಭದಲ್ಲಿ ಖೇದ ವ್ಯಕ್ತ ಪಡಿಸುತ್ತೇನೆ.

ಗಮನ ಸೆಳೆಯುವ ಸೂಚನೆ

ವಿಷಯ : ಚಾಮರಾಜನಗರ ತಾಲ್ಲೂಕಿನಲ್ಲಿ ವಿದ್ಯುಚ್ಛಕ್ತಿಯ ಅಭಾವದಿಂದ ಕೋಟ್ಯಾಂತರ ರೂಪಾಯಿಗಳ ಬೆಳೆ ನಷ್ಟ

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಚಾಮರಾಜನಗರ ತಾಲ್ಲೂಕಿನಲ್ಲಿ ನಿರಂತರವಾಗಿ ವಿದ್ಯುಚ್ಛಕ್ತಿ ಅಭಾವ ತಲೆದೋರಿ ಕೋಟ್ಯಾಂತರ ರೂಪಾಯಿಗಳ ಬೆಳೆ ನಷ್ಟವಾಗುತ್ತಿರುವ ಪರಿಸ್ಥಿತಿ ಒದಗಿರುವ ಬಗ್ಗೆ ಮಾನ್ಯ ಇಂಧನ ರಾಜ್ಯ ಸಚಿವರ ಗಮನ ಸೆಳೆಯುತ್ತೇನೆ.

ಚಾಮರಾಜನಗರ ತಾಲ್ಲೂಕಿನಲ್ಲಿ ಉದ್ಭವಿಸಿರುವ ವಿದ್ಯುತ್ ಸಮಸ್ಯೆಗಳನ್ನು ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿಯು ಮನಗಂಡಿದೆ. ಇದಕ್ಕಾಗಿ ಹಲವಾರು ಸುಧಾರಣಾ ಕ್ರಮಗಳನ್ನು ಕೈಗೊಂಡಿದೆ.

ಚಾಮರಾಜ ನಗರದ ದೊಡ್ಡರಾಯ ಪೇಟೆಯಲ್ಲಿರುವ 66-11 ಕೆ.ವಿ. ವಿದ್ಯುತ್ ಸಬ್‌ಸ್ಟೇಷನ್‌ಗೆ ಮೈಸೂರು-ನಂಜನಗೂಡು -ಚಾಮರಾಜನಗರ 66 ಕೆ.ವಿ. ವಿದ್ಯುತ್ ಪ್ರಸರಣ ಮಾರ್ಗದಿಂದ ವಿದ್ಯುತ್ ಸರಬರಾಜಾಗುತ್ತಿದ್ದು ಮೈಸೂರಿನಿಂದ ನಂಜನಗೂಡಿಗಿರುವ 66 ಕೆ.ವಿ. ವಿದ್ಯುತ್ ಪ್ರಸರಣಾ ಮಾರ್ಗ ಹೆಚ್ಚು ಹೊರೆಯನ್ನು